(ಈ ಹಂತದಲ್ಲಿ ಮಾನ್ಯ ಅಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಕೈಗಾರಿಕೆ ಸ್ಥಾಪಿಸಲು ಭೂನಕ್ಷೆ ಮಂಜೂರಾತಿ

(47) 281

ಶ್ರೀ ನಾಗರಾಜು ಎಂ.ವಿ (ನೆಲಮಂಗಲ)

(ಅ) ಎ.ಸಿ.ಇ.ಡಿಸೈನರ್ಸ್ ಲಿಮಿಟೆಡ್, ಬೆಂಗಳೂರುರವರು ನೆಲಮಂಗಲ ತಾಲ್ಲೂಕು, ಗೋವೇನಹಳ್ಳಿ ಮತ್ತು ಮಿಣ್ಣಾಪುರ....ಗ್ರಾಮಗಳ ವ್ಯಾಪ್ತಿಯಲ್ಲಿ ಸ್ಥಾಪಿಸಲು ಉದ್ದೇಶಿಸಿರುವ ಕೈಗಾರಿಕೆಗೆ ಕೆ.ಐ.ಎ.ಡಿ.ಬಿ. ಅನುಮತಿ ಪತ್ರದಲ್ಲಿ ತಿಳಿಸಿರುವಂತೆ ನೆಲಮಂಗಲ ಯೋಜನಾ ಪ್ರಾಧಿಕಾರದಿಂದ ಭೂನಕ್ಷೆಗೆ ಮಂಜೂರಾತಿ ಪಡೆದಿದ್ದಾರೆಯೇ;

(ಆ) ಹಾಗಿದ್ದಲ್ಲಿ, ಭೂನಕ್ಷೆಗೆ ಮಂಜೂರಾತಿ ನೀಡುವಾಗ ಯೋಜನೆ ಪ್ರಾಧಿಕಾರ ವಿಧಿಸಿರುವ ನಿಬಂಧನೆಗಳೇನು (ನಿಬಂಧನೆಗಳ ಪ್ರತಿಯನ್ನು ನೀಡುವುದು);

(ಇ) ಹಾಗಿಲ್ಲದಿದ್ದಲ್ಲಿ, ಸರ್ಕಾರ ಇವರ ಮೇಲೆ ಕೈಗೊಂಡಿರುವ ಕ್ರಮಗಳೇನು (ವಿವರಗಳನ್ನು ನೀಡುವುದು);

(ಈ) ಈ ಕೈಗಾರಿಕೆ ಸ್ಥಾಪನೆಗಾಗಿ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಅನುಮೋದನೆ ಪಡೆದಿದೆಯೇ;

(ಉ) ಹಾಗಿಲ್ಲದಿದ್ದಲ್ಲಿ, ಈ ಕಂಪನಿಯವರ ಮೇಲೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು (ಪೂರ್ಣ ವಿವರಗಳನ್ನು ನೀಡುವುದು)?

ಶ್ರೀ ಜಗದೀಶ್ ಶೆಟ್ಟರ್ (ಮುಖ್ಯಮಂತ್ರಿಗಳು)

(ಅ) ನೆಲಮಂಗಲ ಯೋಜನಾ ಪ್ರಾಧಿಕಾರದಿಂದ ನಕ್ಷೆಗೆ ಮಂಜೂರಾತಿ ಪಡೆದಿರುವುದಿಲ್ಲ.

(ಆ) ಅನ್ವಯಿಸಿರುವುದಿಲ್ಲ.

(ಇ) ಅನ್ವಯಿಸುವುದಿಲ್ಲ.

(ಈ) 04.02.2010ರಲ್ಲಿ ಸಿಎನ್‌ಸಿ ಮೆಷಿನ್‌ಗಳನ್ನು ಉತ್ಪಾದನೆ ಮಾಡುವ ಸಲುವಾಗಿ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಕನ್ಸೆಂಟ್ ಫಾರ್ ಎಸ್ಟಾಬ್ಲಿಷ್‌ಮೆಂಟ್ ಪರವಾನಗಿ (CFE) ಪಡೆದಿದೆ.

(ಉ) ಅನ್ವಯಿಸುವುದಿಲ್ಲ.

ಶ್ರೀ ನಾಗರಾಜು ಎಂ.ವಿ : ಮಾನ್ಯ ಅಧ್ಯಕ್ಷರೆ, ಎ.ಸಿ.ಇ.ಡಿಸೈನರ್ಸ್ ಲಿಮಿಟೆಡ್, ಬೆಂಗಳೂರುರವರು ನೆಲಮಂಗಲ ತಾಲ್ಲೂಕು, ಗೋವೇನಹಳ್ಳಿ ಮತ್ತು ಮಿಣ್ಣಾಪುರ ಗ್ರಾಮಗಳ ವ್ಯಾಪ್ತಿಯಲ್ಲಿ ಸ್ಥಾಪಿಸಲು ಉದ್ದೇಶಿಸಿರುವ ಕೈಗಾರಿಕೆಗೆ ಕೆ.ಐ.ಎ.ಡಿ.ಬಿ. ಅನುಮತಿ ಪತ್ರದಲ್ಲಿ ತಿಳಿಸಿರುವಂತೆ ನೆಲಮಂಗಲ ಯೋಜನಾ ಪ್ರಾಧಿಕಾರದಿಂದ ಭೂನಕ್ಷೆಗೆ ಮಂಜೂರಾತಿ ಪಡೆದಿದ್ದಾರೆಯೇ ಎಂದು ಪ್ರಶ್ನೆ ಕೇಳಿದರೆ ನೆಲಮಂಗಲ ಯೋಜನಾ ಪ್ರಾಧಿಕಾರದಿಂದ ಮಂಜೂರಾತಿ ಪಡೆದಿರುವುದಿಲ್ಲವೆಂದು ಹೇಳಿರುತ್ತೀರಿ. ಭೂನಕ್ಷೆಗೆ ಮಂಜೂರಾತಿ ನೀಡುವಾಗ ಯೋಜನಾ ಪ್ರಾಧಿಕಾರ ವಿಧಿಸಿರುವ ನಿಬಂಧನೆಗಳೇನು ಎಂದು ಕೇಳಿರುವುದಕ್ಕೆ ಅನ್ವಯಿಸುವುದಿಲ್ಲವೆನ್ನುವ ಉತ್ತರವನ್ನು ಕೊಟ್ಟಿರುತ್ತೀರಿ. ಅನ್ವಯಿಸುವುದಿಲ್ಲವೆನ್ನುವುದಾದರೆ ಯೋಜನಾ ಪ್ರಾಧಿಕಾರ ಏಕೆ ಬೇಕು ಎನ್ನುವುದನ್ನು ಮಾನ್ಯ ಮುಖ್ಯಮಂತ್ರಿಗಳು ತಿಳಿಸಬೇಕು. ಸರ್ಕಾರ ಇವರ ಮೇಲೆ ಕೈಗೊಂಡಿರುವ ಕ್ರಮಗಳೇನು ಎಂದು ಕೇಳಿದರೆ ಅದಕ್ಕೂಅನ್ವಯಿಸುವುದಿ–ಲ್ಲವೆಂದು ಉತ್ತರ ಹೇಳುತ್ತಾರೆ. ಕೈಗಾರಿಕೆ–ಸ್ಥಾಪನೆಗಾಗಿ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಮಾತ್ರ ಅನುಮೋದನೆ ತೆಗೆದುಕೊಂಡಿದ್ದಾರೆಂದು ಹೇಳುತ್ತಾರೆ. ಕಂಪನಿಯವರ ಮೇಲೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ಎಂದು ಕೇಳಿದರೆ ಅನ್ವಯಿಸುವುದಿಲ್ಲವೆನ್ನುವ ಉತ್ತರವನ್ನು ಹೇಳುತ್ತಾರೆ. ಸನ್ಮಾನ್ಯ ಮುಖ್ಯಮಂತ್ರಿಗಳನ್ನು ನಾನು ಕೇಳಬಯಸುವುದು ಅಲ್ಲಿ ಕುಮದ್ವತಿ ನದಿ ಹರಿಯುವುದಕ್ಕೆ ಜಾಗವನ್ನು ಬಿಟ್ಟಿದ್ದು ಅಲ್ಲಿ ಕಲ್ಲನ್ನು ಹಾಕಿದ್ದೇವೆ. 80 ಎಕರೆಯಲ್ಲಿ "A" ಸಿಟಿ ಫ್ಯಾಕ್ಟರಿ ಮಾಡುತ್ತಿದ್ದಾರೆ. ಅದನ್ನು ಸಂಪೂರ್ಣ ಮುಚ್ಚಿ ಬಿಟ್ಟಿದ್ದಾರೆ. ಅಲ್ಲಿ ಅವರು ಫಾರಂ 53 ಹಾಕಿದ್ದಾರೆ. ಅದು ಹೈಕೋರ್ಟಿನಲ್ಲಿ ಪೆಂಡಿಂಗ್ ಇದೆ. ಅದಕ್ಕೆ KIADB ಯವರು ಕಣ್ಣುಮುಚ್ಚಿಕೊಂಡು ಪರ್ಮಿಷನ್ ಕೊಟ್ಟು ಬಿಟ್ಟಿದ್ದಾರೆ. 4 ಎಕರೆ ಸರ್ಕಾರಿ ಭೂಮಿ ಇದೆ. ಸರ್ಕಾರಿ ಭೂಮಿಯನ್ನು ಒತ್ತುವರಿ ಮಾಡಿಕೊಂಡಿದ್ದಾರೆ ಅದಕ್ಕೆ ಒಂದು ಪೈಸೆ ಹಣವನ್ನು ಕಟ್ಟಿಲ್ಲ. ಇದಕ್ಕೆ KIADB ಯವರು ಹಣವನ್ನು ಕಟ್ಟಿಲ್ಲ. 80 ಎಕರೆ ಜಾಗದಲ್ಲಿ ಒಂದು ಫ್ಯಾಕ್ಟರಿ

ಕಟ್ಟಡಿದರೂ, ಲೋಕಲ್‌ದವರಿಗೆ ಒಂದು ಕೆಲಸವನ್ನೂ ಕೂಡ ಕೊಡುವುದಿಲ್ಲ. ಸರ್ಕಾರಿ ಜಾಗವನ್ನು ಒತ್ತುವರಿ ಮಾಡಿಕೊಂಡಿದ್ದಾರೆ. ಒಂದು ಪ್ಲ್ಯಾನ್ ಕೂಡ ತೆಗೆದುಕೊಂಡಿಲ್ಲ.ಸನ್ಮಾನ್ಯ ಮುಖ್ಯಮಂತ್ರಿಗಳು ಕೂಡಲೇ ಅದನ್ನು ಬಂದ್ ಮಾಡಿ ಸೂಕ್ತ ತನಿಖೆಗೆ ವಹಿಸುವುದಕ್ಕೆ ಮಾರ್ಗದರ್ಶನ ಮಾಡಬೇಕು.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ನಾಗರಾಜುರವರು ಪ್ರಶ್ನೆ ಕೇಳಿದ್ದು, ಎ.ಸಿ.ಇ.ಡಿಸೈನರ್ಸ್ ಲಿಮಿಟೆಡ್, ಬೆಂಗಳೂರು ಇವರು ಕೆಲವೊಂದು ಗ್ರಾಮಗಳ ವ್ಯಾಪ್ತಿಯಲ್ಲಿ ಕೆ.ಐ.ಎ.ಡಿ.ಬಿ. ಮತ್ತು ನೆಲಮಂಗಲ ಯೋಜನಾ ಪ್ರಾಧಿಕಾರದಿಂದ ಭೂನಕ್ಷೆಗೆ ಮಂಜೂರಾತಿ ಪತ್ರವನ್ನು ಪಡೆದಿಲ್ಲವೆನ್ನುವುದನ್ನು ನಾನು ಈಗಾಗಲೇ ಕೊಟ್ಟಿರುವ ಉತ್ತರದಲ್ಲಿ ಹೇಳಿದ್ದೇನೆ. ಈ ಕೈಗಾರಿಕೆಯ ಸ್ಥಾಪನೆಗಾಗಿ ಪರಿಸರ ಮಾಲಿನ್ಯ ನಿಯಂತ್ರಣ ಕೇಂದ್ರ ಮಂಡಳಿಯಿಂದ ಅವರು CFE ಪಡೆದಿದ್ದಾರೋ ಇಲ್ಲವೋ ಎಂದು ಕೇಳಿದ್ದಕ್ಕೆ ಪಡೆದಿದ್ದಾರೆಂದು ಉತ್ತರವನ್ನು ಕೊಟ್ಟಿದ್ದೇನೆ. ಮಾನ್ಯ ಶಾಸಕರು ಹೇಳುವಂಥದ್ದು ಅವರು ಕೆಲವು ನಿಯಮಗಳನ್ನು ಉಲ್ಲಂಘನೆ ಮಾಡಿದ್ದಾರೆ. ಅವರು ಕಾನೂನಿನ ರೀತಿಯಲ್ಲಿ ನಡೆದುಕೊಂಡಿಲ್ಲವೆನ್ನುವ ಮಾತನ್ನು ಹೇಳುತ್ತಿದ್ದಾರೆ. ಅದರ ಬಗ್ಗೆ ಸಂಪೂರ್ಣವಾಗಿ ವಿಚಾರಣೆ ಮಾಡಿಕೊಂಡು ಮುಂದೆ ಕಾನೂನು ರೀತಿ ಮತ್ತು ನಿಯಮಗಳನ್ನು ಮೀರಿ ಅವರು ಏನಾದರೂ ಮಾಡಿದ್ದರೆ ಅದರ ಬಗ್ಗೆ ನಾನು ವಿಚಾರಣೆ ಮಾಡಿಸುತ್ತೇನೆ, ಅದರ ಬಗ್ಗೆ ನಾನು ಮುಂದಿನ ಕ್ರಮವನ್ನು ಕೈಗೊಳ್ಳುತ್ತೇನೆ.

ಶ್ರೀ ನಾಗರಾಜು ಎಂ.ವಿ. : ಸ್ಟೇ ತೆಗೆದುಕೊಂಡು ಬಿಟ್ಟು ಒಂದು ಪೈಸೆ ಟ್ಯಾಕ್ಸ್ ಕಟ್ಟುತ್ತಿಲ್ಲ. ಸನ್ಮಾನ್ಯ ಮಂತ್ರಿಗಳಿಗೆ ನಾನು ಅನೇಕ ಸಾರಿ ಹೇಳಿದ್ದೇನೆ. ದಯಮಾಡಿ ಅದರ ಬಗ್ಗೆ ಸೂಕ್ತ ಕ್ರಮ ಕೈಗೊಂಡು ಟ್ಯಾಕ್ಸ್ ಕಟ್ಟುವಂತೆ ಮಾಡಿದರೆ ಪಂಚಾಯಿತಿಗೆ ಅನುಕೂಲವಾಗುತ್ತದೆ. ಒಂದು ನಯಾಪೈಸೆ ಟ್ಯಾಕ್ಸ್ ಕಟ್ಟುತ್ತಿಲ್ಲ. ಸ್ಟೇ ಇದೆ, ಎಂದು ಹೇಳಿಬಿಟ್ಟು ಅವರು ಏನೂ ಪರ್ಮಿಷನ್ ತೆಗೆದುಕೊಳ್ಳುತ್ತಿಲ್ಲ.

ಶ್ರೀ ಜಗದೀಶ್ ಶೆಟ್ಟರ್ : ಏನು ತಡೆಯಾಜ್ಞೆ ಇದೆ, ಅದನ್ನು vacate ಮಾಡಿಸಿ ಮುಂದೆ ಏನು ಕ್ರಮ ಕೈಗೊಳ್ಳಬೇಕು ಅದನ್ನು ಕೈಗೊಳ್ಳತ್ತೇನೆ.